Mr. SPEAKER.—There are two points relating to which the Hon'ble Member Sri Ganji Veerappa wanted clarification. One is with regard to the point about the Hon'ble Minister. It has not been put in the agenda. Sri S. Sivappa, the Leader of the Opposition who had gone out of Bangalore wired to me that he is unable to come to the House, according to his telegram, until the 4th. I wanted to deal with it when all are present in the House, rather than to do it when they are not present. Therefore, I suggest that we will put it for the next sittings. I suppose that would be perfectly allright ?

HON'BLE MEMBERS.—Yes, Sir.

Mr. SPEAKER.—Now we resume the Debate.

---

## MYSORE VILLAGE PANCHAYATS AND LOCAL BOARDS (AMENDMENT) BILL, 1965.

*(Motion to Consider— contd).*

ಶ್ರೀ ನಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಪತಿಗಳೇ, ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಪಂಚಾಯಿತರಾಜ್ಯ ಪರಿಷತ್ತಿನ ಸಭೆ ನಡೆದಾಗ ಕೇಂದ್ರ ಸರ್ಕಾರದ ಕಮ್ಯುನಿಟಿ ಡೆವಲಪ್‌ಮೆಂಟ್ ಮಂತ್ರಿಗಳಾದ ಎಸ್.ಕೆ.ಡೇ ಅವರು ಬಹು ಸ್ಪಷ್ಟವಾಗಿ ಒಂದು ಆದೇಶ ಕೊಟ್ಟಿದ್ದಾರೆ. ಎಷ್ಟು ಬೇಗ ಪಂಚಾಯಿತಿ ರಾಜ್ಯ ಮಸೂದೆ ಜಾರಿಗೆ ಬರುತ್ತದೆಯೋ ಅಷ್ಟು ಒಳ್ಳೆಯದು. ಈ ಕಾನೂನು ಜಾರಿಗೆ ಬರುವುದರಿಂದ ಪ್ರಜಾಪ್ರಭುತ್ವ ಪದ್ಧತಿ ಯಶಸ್ವಿಯಾಗಿ ಜಾರಿಗೆ ತಂದಂತಾಗುವುದು ಎಂದು ಹೇಳಿದ್ದಾರೆ. ಈಗಾಗಲೇ ಗುಜರಾತ್, ಮಧ್ಯಪ್ರದೇಶ ಮತ್ತು ಪಂಜಾಬ ರಾಜ್ಯಗಳಲ್ಲಿ ಈ ಮಸೂದೆಯನ್ನು ಅಂಗೀಕರಿಸಿದ್ದಾರೆ ಅದೇ ರೀತಿ ಉಳಿದ ರಾಜ್ಯಗಳು ಇದನ್ನು ಜಾರಿಗೆ ತರಬೇಕೆಂದು ಅವರು ಬಹು ಸ್ಪಷ್ಟವಾಗಿ ಆದೇಶ ಕೊಟ್ಟರು. ಆ ಸಭೆಯಲ್ಲಿ ಭಾಗವಹಿಸಿದ ನಮ್ಮ ಮುಖ್ಯ ಮಂತ್ರಿಗಳು ಸಹ ಅದೇ ಮಾತನ್ನು ಒತ್ತಿ ಹೇಳಿದರು. ಅವರು ಮತ್ತೂ ಹೇಳಿದ್ದೇನೆಂದರೆ ಈಗಾಗಲೇ ನಮ್ಮ ರಾಜ್ಯದಲ್ಲಿ ಈ ಪಂಚಾಯಿತಿ ರಾಜ್ಯ ಮಸೂದೆಯನ್ನು ತಯಾರಿಸಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಸಿದೆ. ಅಲ್ಲಿಂದ ಅದು ಬಂದ ಕೂಡಲೆ ಆದಷ್ಟು ಬೇಗನೆ ಮಸೂದೆ ಪಾಸ್ ಮಾಡಿ ಕಾನೂನು ಜಾರಿಗೆ ಬರುವ ಹಾಗೆ ಮಾಡುತ್ತೇವೆ ಎಂದು ಅಂದು ಗ್ಲಾಸ್ ಹೌಸ್‌ನಲ್ಲಿ ನಡೆದ ಪರಿಪತ್ತಿನಲ್ಲಿ ಅವರು ಹೇಳಿದರು. ತದನಂತರ ನಂದೀ ಬೆಟ್ಟದಲ್ಲಿ ನಡೆದ ಪರಿಷತ್ತಿನಲ್ಲಿ ಕೂಡ ಆದಷ್ಟು ಬೇಗನೆ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಸಹಕಾರ ಮಂತ್ರಿಗಳು ಮತ್ತು ಉಪ ಮಂತ್ರಿಗಳು ಆಗ್ಗೆ ಅಲ್ಲಿ ಹಾಜರ್ ಇದ್ದರು. ಈ ಮಸೂದೆ ಅಸೆಂಬ್ಲಿಯಲ್ಲಿ ಚರ್ಚೆಗೆ ಬಂದಾಗ್ಗೆ ಸದಸ್ಯರೆಲ್ಲರೂ ಪಾತನಾಡಿ ಇದನ್ನು ಸ್ವಾಗತಿಸಿದ್ದಾರೆ. ಆದಷ್ಟು ಬೇಗನೆ ಜಾರಿಗೆ ತರುವ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಹೇಳಿದ್ದಾರೆ. ಹೊಸ ವರ್ಷದ ಪ್ರಾರಂಭದಲ್ಲಿ ಚುನಾವಣೆ ನಡೆಸುವ ಹಾಗೆ ಇದನ್ನು ಜಾರಿಗೆ ತಂದು ಕಾರ್ಯರೂಪಕ್ಕೆ ಬರುವುದು ಎಂದು ಆಶ್ವಾಸನೆ ಸಹ ಕೊಟ್ಟಿದ್ದರು. ಇದಕ್ಕೆ ಅನುಕೂಲ ವಾತಾವರಣ ಉಂಟಾಗುವ ಹಾಗೆ ನಾವೂ ಸಹ ನಮ್ಮ ನಮ್ಮ ಕ್ಷೇತ್ರದಲ್ಲಿ ಇದನ್ನು ಪ್ರಚಾರ ಮಾಡಿದ್ದೇವೆ. ಅನೇಕ ಮನವಿಗಳಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಸಿ ಕೊಟ್ಟಿದ್ದೇವೆ. ಪಂಚಾಯಿತಿ ಬಿಲ್ಲನ್ನು ಪಾಸು ಮಾಡುವುದಕ್ಕೋಸ್ಕರ ನವೆಂಬರ ತಿಂಗಳಿನಲ್ಲಿ ಅಧಿವೇಶನ ಕರೆಯುತ್ತೇವೆ ಎಂದು ಸಹ ಹೇಳಿದರು. ಈ ಅಧಿವೇಶನ ಕರೆದಾಗ್ಗೆ ನಾವೂ ಕೂಡ ಅದೇ ಭಾವನೆ ತಾಳಿದ್ದೆವು. ಆದರೆ ಉಪ ಮಂತ್ರಿಗಳು ಮಾತನಾಡುತ್ತಾ ಹೇಳಿದ್ದಾರೆ. ಈಗ ಪಳೇ ಮಸೂದೆಯ ವಾಯಿದೆ ಮುಗಿಯುತ್ತಾ ಬಂದಿದೆ ಆದುದರಿಂದ ಈಗ ಈ ಮಸೂದೆಗೆ ಜೀವದಾನ ಕೊಟ್ಟು ಪರಿಶೀಲಕ ಸಮಿತಿಯಿಂದ ಬಂದ ಹೊಸ ಮಸೂದೆಯನ್ನು ಜಾರಿ ಮಾಡುತ್ತೇವೆಂದು ಹೇಳಿದರು. ಈಗ ವಾಯಿದೆ ಮುಗಿಯುತ್ತ ಬಂದಿರುವುದರಿಂದ ಈ ತಿದ್ದುಪಡಿ ಮೂಲಕ ಒಂದು ವರ್ಷ ಅವಧಿ ಹೆಚ್ಚಿಸಬೇಕು ಎನ್ನುವುದನ್ನು ನಾವು ವಿರೋಧಿಸಬೇಕಾಗಿದೆ. ಇದಕ್ಕೆ ಇಷ್ಟೇ ಕಾರಣ. ಪ್ರಜಾ ಪ್ರಭುತ್ವಪದ್ಧತಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿಲ್ಲ. ಯಾಕೆಂದರೆ ಅದನ್ನು ಎದುರಿಸಲು ಇವರಿಗೆ ಸಾಧ್ಯವಾಗಿಲ್ಲ. ಜನರಿಗೆ

ನರಕಾರದ ನೀತಿಯಲ್ಲಿ ನಂಬಿಕೆ ಇಲ್ಲ. ಇದನ್ನು ಸ್ಪಷ್ಟಪಡಿಸುತ್ತೇನೆ. ಜನತೆಯನ್ನು ಎದುರಿಸುವುದು ಇವರಿಗೆ ಸಾಧ್ಯವಾಗುವುದಿಲ್ಲ. ಈ ತಿದ್ದುಪಡಿ ತಂದು ಈ ಮನೂದೆ ಪ್ರಕಾರ ನಡೆಸಬೇಕಾದ ಚುನಾವಣೆಗಳನ್ನು ಹಿಂದೆ ಹಾಕುವುದು ಒಳ್ಳೆಯ ವಾತಾವರಣ ಉಂಟು ಮಾಡುವುದಿಲ್ಲ. ಈಗ ಜನರಲ್ಲಿ ನಿರಾಶೆ ಅಸಮಾಧಾನ ಉಂಟಾಗಿ ಪರಿಸ್ಥಿತಿಯು ಕೈ ಮೀರಿ ಹೋಗಿದೆ. ಅದನ್ನು ಯಾವ ರೀತಿ ಸುಧಾರಿಸಲು ಸಾಧ್ಯವಿಲ್ಲ. ಕಳೆದ 3 ವರ್ಷಗಳ ರಾಜ್ಯದಾಡಳಿತದಲ್ಲಿ ಅತ್ಯಸ್ತಿ ಅಸಮಾಧಾನ ಉದ್ವೇಗ ಉಂಟಾಗಿದೆ. ಇಂದು ದೇಶದಲ್ಲಿ ಭಯಂಕರ ಕ್ರಾಂತಿ ಆಗದೇ ಇರುವುದಕ್ಕೆ ನಮ್ಮ ನಿಮ್ಮ ಪುಣ್ಯ ಎಂದು ಹೇಳಲು ಬಯಸುತ್ತೇನೆ. ಆದುದರಿಂದ ಸರ್ಕಾರದವರು ಜನರ ಬಗ್ಗೆ ಏನು ಒಂದು ಭಾವನೆಯನ್ನಿಟ್ಟು ಕೊಂಡಿದ್ದಾರೋ ಅದು ಸರಿಯಾದ್ದಲ್ಲ. ಈಗಲಾದರೂ ಇವರು ಸದ್ಬುದ್ಧಿಯನ್ನು ತಂದುಕೊಳ್ಳಲಿಲ್ಲ ನಾವಾದರೋ ಇಲ್ಲ ಇಷ್ಟು ಭಯಂಕರವಾದ ಫಲ ಇದ್ದಾಗ್ಲೂ ಇನ್ನೂ ಒಂದು ವಾರ ಕಾಲ ಇಲ್ಲ ಇರುವುದಕ್ಕೆ ಸಿದ್ಧರಾಗಿದ್ದೇವೆ, ಆದುದರಿಂದ ಈ ಮೂಲ ಮನೂದೆಯನ್ನು ಚರ್ಚೆ ಮಾಡಿ ಅದನ್ನು ಪಾಸ್ ಮಾಡುವವರೆಗೂ ನಾವು ಇರುವುದಕ್ಕೆ ಸಿದ್ಧವಾಗಿದ್ದೇವೆ, ಈ ಬಿಲ್ಲನ್ನು ಸರ್ಕಾರದವರು ವಾಪಸ್ಸು ತೆಗೆದುಕೊಂಡು ಪಂಚಾಯಿತಿ ರಾಜ್ಯ ಬಿಲ್ಲನ್ನು ತಂದು ಅದನ್ನು ಪಾಸ್ ಮಾಡಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, 5 ವರ್ಷಕ್ಕೆ ಚುನಾವಣೆ ನಡಯಬೇಕೆಂದಿದ್ದ ಅವಧಿಯನ್ನು ಈ ತಿದ್ದುಪಡಿ ಮನೂದೆಯ ಮೂಲಕ 6 ವರ್ಷಕ್ಕೆ ಹೆಚ್ಚಿಸಬೇಕೆಂದು ಈಗ ಸರ್ಕಾರದವರು ಇದನ್ನು ತಂದಿದ್ದಾರೆ. ಆದರೆ ದೇಶದಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳ ವಾಸ್ತವಾಂಶ ಇವರಿಗೆ ಗೊತ್ತಿಲ್ಲವೆಂದು ಕಾಣುತ್ತಿದೆ. ನನಗೀಗ ನಮ್ಮ ಗುಬ್ಬಿ ತಾಲ್ಲೂಕಿನ ತಾಲ್ಲೂಕ ಬೋರ್ಡಿನವರು ತಿಳಿಸುತ್ತಿದ್ದಾರೆ : ಈಗಿರತಕ್ಕ ಪರಿಸ್ಥಿತಿಯಲ್ಲಿ ಅವರು ಕೆಲಸ ಮಾಡಲು ಸಾಧ್ಯವಿಲ್ಲ ಎಂಬುದಾಗಿ. ಅವರಿಗಿನ್ನೂ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕಾಗಿತ್ತು ; ಹಾಗೆ ಕೊಡದೇ ಇರುವುದರಿಂದ ಅವರೆಲ್ಲರೂ ಮಾಸ್ ರಸಿಗ್ನೇಷನ ಕೂಟ್ಟಿದ್ದಾರೆಂದು ನನಗೆ ಖಚಿತವಾಗಿ ತಿಳಿದು ಬಂದಿದೆ. ಈಗ ಒಟ್ಟಿನಲ್ಲಿ ಏನಾಗಿದೆಯೆಂದರೆ : ಈಗಿರತಕ್ಕ ಫ್ರೇಂ ವರ್ಕಿನಲ್ಲಿ ಯಾವ ತಾಲ್ಲೂಕು ಬೋರ್ಡುಗಳೂ ಕೆಲಸಮಾಡುವುದಕ್ಕಾಗುವುದಿಲ್ಲ. ಇನ್ನು ಆ ಗ್ರಾಮ ಪಂಚಾಯಿತಿಗಳ ವಿಚಾರವು ಹೀಗೇ ಆಗಿದೆ. ಹೀಗಾಗಿ ಈಗಿನ ಪರಿಸ್ಥಿತಿಯಲ್ಲಿ ಈ ಸ್ಥಳೀಯ ಸಂಸ್ಥೆಗಳೊಂದೂ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಅವುಗಳೆಲ್ಲಾ ಮಾಸ್ ರಸಿಗ್ನೇಷನ್ ಕೊಡಬೇಕೆಂಬ ಆಲೋಚನೆಯಲ್ಲವೆ. ಪರಿಸ್ಥಿತಿ ಹೀಗಿರುವಾಗ ಇವುಗಳ ಚುನಾವಣೆಯನ್ನು ಇನ್ನೂ ಒಂದು ವರ್ಷಕಾಲ ಮುಂದಕ್ಕೆ ಹಾಕ ಬೇಕೆಂಬುದು ಒಂದು ಹಾಸ್ಯಾಸ್ಪದವಾದ ವಿಚಾರ. ಇದೆಲ್ಲವನ್ನೂ ನೋಡಿದರೆ ಸರ್ಕಾರದವರಿಗೆ ದೇಶದ ಪರಿಸ್ಥಿತಿ ಅರಿವಾಗಿಲ್ಲವೆಂದು ಕಾಣುತ್ತದೆ. ಸರ್ಕಾರದವರು ಈ ರೀತಿ ಮಾಡುವುದು ಕಾರೋಚಿತವೂ ಅಲ್ಲ, ಇದು ಈ ಸಭೆಗೆ ಮರ್ಯಾದೆಯನ್ನೂ ತರತಕ್ಕದ್ದಲ್ಲ. ಈಗಲಾದರೂ ಇವರು ಈ ತಿದ್ದುಪಡಿ ಮನೂದೆಯನ್ನು ಹಿಂದಕ್ಕೆ ತೆಗದುಕೊಂಡು ಮೂಲ ಬಿಲ್ಲನ್ನು, ಈ ಸಭೆಯ ಮುಂದೆ ತಂದು ಅದನ್ನು ಪಾಸಮಾಡಿಸುವುದು ಒಳ್ಳೆಯದೆಂದು ಹೇಳುತ್ತೇನೆ. ನನಗೆ ಇಷ್ಟು ಮಾತ ನಾಡುವುದಕ್ಕೆ ನಾಲ್ಕು ನಿಮಿಷ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*(Sri G. Marulappa stood up to speak).*

Mr. SPEAKER.—Sri Marulappa should know that the reasons behind the rule is, Hon'ble Members are expected to be present and more so when their names are sent up indicating a desire to participate. So, like that. There is when I called upon the Hon'ble Member, he was not present. The rule is no discretion for me.

ಶ್ರೀ ಕೊಂಡಜ್ಜಿ ಬಸಪ್ಪ (ಸಹಕಾರ ಕಾಖೆಯ ಉಪಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರನೇಕರು ಈ ಬಿಲ್ಲನ್ನು ವಿರೋಧಿಸುತ್ತಾ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಅವುಗಳಲ್ಲಿ ಮುಖ್ಯವಾದ ಕೆಲವು ವಿಷಯಗಳತ್ತ ನಾನೀಗ ಈ ಮಾನ್ಯ ಸಭೆಯ ಗಮನವನ್ನು ಸೆಳಯಬಯಸುತ್ತೇನೆ.

ಶ್ರೀಮಾನ್ ವಿ. ಎಸ್. ಪಾಟೀಲರವರು ಮಾತನಾಡುತ್ತಾ ಮೈಸೂರು ರಾಜ್ಯದಲ್ಲಿ ಭೂಸುಧಾರಣೆ ಮನೂದೆಯನ್ನೂ ಮತ್ತು ಈ ಮನೂದೆಯನ್ನು ಹೀಗೆ ಒಟ್ಟಿಗೆ ಎರಡನ್ನೂ ಮಿಶ್ರಮಾಡಿಕೊಂಡು ಮಾತನಾಡುತ್ತಾ ಇಲ್ಲಿ ಯಾವ ಡೆವಲಪ್‌ಮೆಂಟ್ ಕೆಲಸಕಾರ್ಯಗಳೂ ನಡೆದಿಲ್ಲವೆಂದು ಹೇಳಿದ್ದರೆ. ಆದರೆ ಭೂಸುಧಾರಣೆಯ ಬಗ್ಗೆ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್

(ಶ್ರೀ ಕೊಂಡಜ್ಜಿ ಬಸಪ್ಪ)

ಎಂ. ವಿ. ಕೃಷ್ಣಪ್ಪನವರು ಅವರಿಗೆ ಉತ್ತರ ಕೊಡುತ್ತಾರೆ. ಆದರೆ ಇನ್ನೂನನ್ನ ಪರವಾಗಿ ಹೇಳುವುದಾದರೆ ಈ ಪಂಚಾಯಿತ ರಾಜ್ಯ ಬಿಲ್ಲನ ವಿಚಾರದಲ್ಲಿ ಬಲವಂತರಾಯ ಮೆಹತರವರ ರಿಪೋರ್ಟು ನಮಗೆ ಬಂದ ನಂತರ ಇತರ ರಾಜ್ಯಗಳಿಗಿಂತ ನಮ್ಮ ಮೈಸೂರು ರಾಜ್ಯ ಮುಂದೆ ಬಂದು ನಮ್ಮ ಸಂಸ್ಥಾನದಲ್ಲಿ ಅದಕ್ಕನುಗುಣವಾಗಿ ಒಂದು ಬಿಲ್ಲನ್ನು ತಂದು, ಆಗ ಇಲ್ಲಿ ಒಂದು ಹೊಸ ಬಿಲ್ಲನ್ನೇ ಪಾಸ್‌ಮಾಡಿ ಅದರ ಪ್ರಕಾರ ಇಲ್ಲಿಯವರೆಗೂ ಈ ಸಂಸ್ಥೆಗಳು ಕೆಲಸಮಾಡಿಕೊಂಡು ಬರುತ್ತಿವೆ. ಅವುಗಳಲ್ಲಿ ಅನೇಕ ಸಂಸ್ಥೆಗಳು ಬಹಳ ತೃಪ್ತಿಕರವಾಗಿ ಕೆಲಸಮಾಡಿಕೊಂಡು ಬಂದಿವೆ. ಇವುಗಳಲ್ಲಿ ಬಹುಭಾಗ ತರುಣರೇ ಇದ್ದಾರೆ. ಅವರೆಲ್ಲರೂ ಬಹಳ ಆಸಕ್ತಿವಹಿಸಿ ಕೆಲಸಮಾಡುತ್ತಿದ್ದಾರೆ. ಈ ಸಂಸ್ಥೆಗಳಿಗೆ ನಾವು ಇಲ್ಲಿ ಇನ್ನಾವ ರಾಜ್ಯದಲ್ಲೂ ಕೊಡದೆ ಇರುವಷ್ಟು ಹಣವನ್ನು ಅಂದರೆ ಭೂಕಂದಾಯದ ಶೇಕಡ 60 ರಷ್ಟು ಹಣವನ್ನು ಕೊಡುತ್ತಾ ಬಂದಿದ್ದೇವೆ. ಆದಕಾರಣ ಆ ಮಾನ್ಯ ಸದಸ್ಯರೇನು ಹೇಳಿದ್ದಾರೋ ಅದರಲ್ಲಿ ಏನೂ ತಿರುಳಿಲ್ಲ ಎಂಬುದನ್ನು ನಾನು ಈಗ ಈ ಸಭೆಗೆ ತಿಳಿಸಲಚ್ಚಿಸುತ್ತೇನೆ.

ಇನ್ನು ಕೆಲವರು ಈ ಸಂಸ್ಥೆಗಳಲ್ಲಿ ಬಹುಭಾಗ ಹಣವನ್ನು ದುರುಪಯೋಗಪಡಿಸಿಕೊಂಡಿವೆ ಎಂಬುದಾಗಿ ಹೇಳಿದ್ದಾರೆ. ಆದರೆ ಆ ವಿಚಾರವನ್ನು ಹೇಳಿದ ಸದಸ್ಯರು ಇದನ್ನು ಅಷ್ಟು ಸೀರಿಯಸ್ಸಾಗಿ ಹೇಳಿದ್ದಾರೆಂದು ನಾನು ಭಾವಿಸುವುದಿಲ್ಲ. ಈ ಒಕ್ಕಿನಲ್ಲಿ ಅವರು ಹೇಳುವಷ್ಟು ಸುಲಭವಾಗಿ ಹಣವನ್ನು ದುರುಪಯೋಗ ಮಾಡುವುದಕ್ಕಾಗುವುದಿಲ್ಲ. ಆ ಒಕ್ಕಿನಲ್ಲಿ ಅಂಥ ಕಲಂಗಳನ್ನು ಅಳವಡಿಸಲಾಗಿದೆ. ತಾಲ್ಲೂಕ ಬೋರ್ಡಿನ ಅಥವಾ ಗ್ರಾಮಪಂಚಾಯಿತಿಯ ಯಾವ ಅಧ್ಯಕ್ಷರಾಗಲೀ ತಪ್ಪು ನಡುವಳಿಕೆ ನಡೆದರೆ ಅಂಥವರನ್ನು ಅವಿಶ್ವಾಸ ನಿರ್ಣಯದ ಮೂಲಕ ಕಿತ್ತುಹಾಕುವುದಕ್ಕೆ ಅವಕಾಶ ವಿರುತ್ತದೆ. ಅಂಥ ಒಂದು ಅಸ್ತ್ರವನ್ನು ಈ ಪ್ರಜಾಪ್ರಭುತ್ವದಲ್ಲಿ ಈ ಸಂಸ್ಥೆಗಳ ಸದಸ್ಯರಿಗೆ ಕೊಡಲಾಗಿದೆ. ಇಷ್ಟೇ ಅಲ್ಲದೆ ಇವರ ಮೇಲ್ಪಟ್ಟು ಅಲ್ಲಿ ಅಂಥ ತಪ್ಪು ನಡುವಳಿಕೆಗಳು ನಡೆಯದಂತೆ ನೋಡಿಕೊಳ್ಳಲು ನಮ್ಮ ಅಧಿಕಾರಿಗಳಿಗೆ ಬೇರೆ ಅಧಿಕಾರವನ್ನು ಕೊಡಲಾಗಿದೆ. ಅದಷ್ಟೂ ಈ ಸಂಸ್ಥೆಗಳು ಒಂದು ಕ್ರಮಬದ್ಧವಾದ ರೀತಿಯಲ್ಲಿ ಕೆಲಸ ಮಾಡುವಂತೆ ನಿಗಾ ಇಡಲಾಗಿದೆ. ಆದುದರಿಂದ ಆ ಮಾನ್ಯ ಸದಸ್ಯರುಗಳು ಹೇಳಿರತಕ್ಕ ಪಾದದಲ್ಲೂ ಸಹಾ ತಿರುಳೇನೂ ಇಲ್ಲವೆಂದು ತಿಳಿಸಲಚ್ಚಿಸುತ್ತೇನೆ.

ಆದರೆ ಇನ್ನೊಬ್ಬ ಸದಸ್ಯರು ಇವುಗಳನ್ನು ಸೂಪರಸೀಡಮಾಡಿಬಿಡಿ ಎಂದು ಒಂದು ಸಲಹೆ ಯನ್ನಿಟ್ಟರು. ಆದು ನನ್ನ ಅಭಿಪ್ರಾಯದಲ್ಲಿ ರೋಗಕ್ಕಿಂತ ಚಿಕಿತ್ಸೆ ಭಯಂಕರವಾದದು ಎನ್ನುವಂತಿದೆ. ಆದುದರಿಂದ ಅದು ಅಷ್ಟು ಸಾಧುವಾದ ಮಾರ್ಗವಲ್ಲ ಎಂದು ತಿಳಿಸಲಚ್ಚಿಸುತ್ತೇನೆ. ಆದರೆ ನಾವು ಮೂಲ ಬಿಲ್ಲನ್ನೇ ಸಭೆಯ ಮುಂದೆ ಅತುರಾತುರಾಗಿ ತಂದು ಪಾಸ್ ಮಾಡಿಸಬೇಕೆಂಬ ಉದ್ದೇಶವಿತ್ತು. ಆದರೆ ಇದೇ ಸಭೆಯಲ್ಲಿ ಒಂದು ಅವಿಶ್ವಾಸ ನಿರ್ಣಯ ಚರ್ಚೆಗೆ ಬಂದ ಕಾರಣ ಇದಕ್ಕೆ ಪೇಳೆ ಸಿಕ್ಕಲಿಲ್ಲ. ಆ ದೃಷ್ಟಿಯಿಂದ ಈಗ ಇದನ್ನು ಇಲ್ಲಿ ಮಂಡಿಸಬೇಕಾಯಿತು. ಆದರೆ ನಾವು ಇಲ್ಲಿ ಒಂದು ವರ್ಷ ಕಾಲ ಕೇಳಿದಾಗ್ಯೂ ಅದನ್ನು ಪೂರ್ತಿ ಉಪಯೋಗ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಇದನ್ನು ತಂದಿಲ್ಲ. ಅಲ್ಲದೆ ಕೆಲವು ಸಂಸ್ಥೆಗಳಿಗೆ ಕಳೆದ ಡಿಸೆಂಬರ್, ಆಗಸ್ಟ್ ಮತ್ತು ಸೆಪ್ಟೆಂಬರುಗಳಲ್ಲಿ ಚುನಾವಣೆಗಳಾಗಿವೆ. ಅವುಗಳಿಗಿನ್ನೂ ವರ್ಷ ತುಂಬಿಲ್ಲ. ಆದರೆ ಆ ದಿವಸ ಶ್ರೀಮಾನ್ ಕೃಷ್ಣಪ್ಪ ಅವರು ಮಾತನಾಡುತ್ತಾ ಮಾನ್ಯ ಮುಖ್ಯ ಮಂತ್ರಿಗಳಿಗೆ ಅವರು ಕೊಟ್ಟ ಒಂದು ಹೇಳಿಕೆಯನ್ನು ಪ್ರಸ್ತಾಪಿಸುತ್ತಾ ಅವರು ಅದರ ಕಡೆಗೆ ಈ ಸಭೆಯ ಗಮನವನ್ನು ಹೆಚ್ಚಿಗೆ ಸೆಳೆದಿದ್ದಾರೆ. ಆದರೆ ಅವರು ಈ ಚುನಾವಣೆಗಳನ್ನು ಏಕೆ ಮುಂದಕ್ಕೆ ಹಾಕಬೇಕಾಯಿತು ಎಂಬುದನ್ನು ತಿಳಿಸಿದ್ದಕ್ಕೆ ಅವರಿಗೆ ಈ ಪಂಚಾಯಿತಿ ರಾಜ್ಯ ಮನೂದೆಯಲ್ಲಿ ವಿಶ್ವಾಸವಿಲ್ಲದೆ ಆ ರೀತಿ ಹೇಳಿದ್ದಾರೆಂದು ಅವರು ಭಾವಿಸಿದ್ದರೆ ಆದು ಖಂಡಿತಾ ನರಿಯಲ್ಲ. ಅವರು ಬಿಲ್ಲನ್ನು ತರುವುದಕ್ಕಾಗದಿದ್ದ ಕಾರಣವನ್ನು ತಿಳಿಸಿದ್ದಾರೆ, ಅಷ್ಟೇ ಆದುದರಿಂದ ಸರ್ವ ಸದಸ್ಯರೂ ಇದನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**Mr. SPEAKER.**—I will put the question to the vote of the House. The question is :

"That the Mysore Village Panchayats and Local Boards (Amendment) Bill, 1965, be taken into consideration."

*The motion was adopted.*

A division was pressed for.

**Mr. SPEAKER.**—The bell will be rung.

*(The bell rang for two minutes).*

Mr. SPEAKER.—I will put the motion to the vote of the House again. The question is :

"That the Mysore Village Panchayats and Local Boards (Amendment) Bill, 1965, be taken into consideration."

*The House divided.*

Mr. SPEAKER.—The result of the division is :

Ayes 72 and Nes. 30

*The motion was adopted.*

Mr. SPEAKER.—There are no amendments and so I put the clauses to the vote of the House. The question is :

"That Clauses 2 and 3 stand part of the Bill."

*The motion was adopted.*

Clauses 2 and 3 were added to the Bill.

2-30 P.M.

Mr. SPEAKER.—Clause 1, the Title and the Preamble. The question is :

"That Clause 1, the Title and the Preamble stand part of the Bill".

*The motion was adopted.*

Clause 1, the Title and the Preamble were added to the Bill.

*Motion to pass.*

Sri KONDAJJI BASAPPA.—Sir, I beg to move :

"That the Mysore Village Panchayat and Taluk Boards (Amendment) Bill, 1965 be passed".

Mr. SPEAKER.—The question is :

"That the Mysore Village Panchayat and Taluk Boards (Amendment) Bill, 1965 be passed".

*The motion was adopted.*